ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 305/2019

ಪಿ. ಡಬ್ಲ್ಯು: 01

ಸಿ. ಡಬ್ಲ್ಯು: 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜಯಸೂರ್ಯ |
| ತಂದೆ/ಪತಿಯ ಹೆಸರು | ಃ | ದಿನೇಶ್. ಎನ್ |
| ವಯಸ್ಸು | ಃ | 27 ವರ್ಷ |
| ವೃತ್ತಿ | ಃ | ಬಿಸನೆಸ್ಸ್ |
| ವಾಸ | ಃ | ಸುಲ್ತಾನ್ ಬತ್ತೇರಿ, ಕೇರಳ ರಾಜ್ಯ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

07.03.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನನಗೆ ನಾಗಮೂರ್ತಿ ಗೊತ್ತು. ನಾನು ದಿಃ 05.05.2019 ರಂದು ನನ್ನ ತಂದೆಯ ಸಹೋದ್ಯೋಗಿ ಸುನೀಲ್ ಕುಮಾರ್ ಜೊತೆ ಹೊಂಡಾ ಸಿಟಿ ಕಾರ್ ನಂ.ಕೆಎಲ್.73.ಎ.7561 ಕಾರಿನಲ್ಲಿ ಮೈಸೂರಿಗೆ ಟ್ರಿಪ್ ಗಾಗಿ ಬಂದಿದ್ದೇನು. ನಾನು ಕಾರು ಚಾಲನೆ ಮಾಡುತ್ತಿದ್ದೆ. ನಾನು ರಂಗನತಿಟ್ಟು ಪಕ್ಷಿಧಾಮದಿಂದ ಬೃಂದಾವನದ ಕಡೆಗೆ ಸಂಜೆ 05.00 ಸಮಯದಲ್ಲಿ ಕಾರ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದೆ. ಬೆಳಗೊಳ ಗ್ರಾಮದ ಹತ್ತಿರ ನಾನು ಕಾರ್ ಚಾಲನೆ ಮಾಡುತ್ತಿದ್ದಾಗ ನಮ್ಮ ಕಾರಿನ ಹಿಂಭಾಗದಿಂದ ಒಂದು ಬಸ್ ಸಂಃ ಕೆಎ.09.ಎಫ್.4470 ನಮ್ಮ ಕಾರಿನ ಹಿಂಭಾಗದಿಂದ ಬಂದು ಡಿಕ್ಕಿ ಪಡಿಸಿತ್ತು. ನಾನು ಕೆಳಗೆ ಇಳಿದು ನೋಡಿದ್ದು ನಂತರ ನನ್ನ ತಂದೆಗೆ ಫೋನ್ ಮಾಡಿ ತಿಳಿಸಿದ್ದೇನು. ಅದು ಆದ ಮೇಲೆ ಪೋಲೀಸರಿಗೆ ಅಪಘಾತದ ಬಗ್ಗೆ ಮಾಹಿತಿ ತಿಳಿಸಿದ್ದು ಅರ್ಧ ಗಂಟೆ ನಂತರ ಪೋಲೀಸರು ಸ್ದಳಕ್ಕೆ ಆಗಮಿಸಿದ ಸ್ದಳ ಮಹಜರ್ ಮಾಡಿದ್ದು ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿ ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಹಿ ತನ್ನದೆಂದು ಗುರುತಿಸಿರುತ್ತಾರೆ. ದೂರನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1.ಎ. ಎಂದು ಗುರುತಿಸಲಾಯಿತು.

ನಾನು ಅಪಘಾತ ಸ್ದಳವನ್ನು ತೋರಿಸಿದ್ದು ಸದರಿ ಸ್ದಳದಲ್ಲಿ ಪೋಲೀಸರು ಮಹಜರ್ ಮಾಡಿರುತ್ತಾರೆ. ಸಾಕ್ಷಿಗೆ ಮಹಜರ್ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಮಹಜರ್ ಅನ್ನು ನಿಪಿ.2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಮಾನತ್ತು ಮಹಜರ್ ತೋರಿಸಲಾಗಿ ಅದರಲ್ಲಿ ತನ್ನ ಸಹಿ

ಇರುವುದನ್ನು ಒಪ್ಪಿದ್ದು ಸದರಿ ಅಮಾನತ್ತು ಮಹಜರ್ ಅನ್ನು ನಿಪಿ.3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3.ಎ. ಎಂದು ಗುರುತಿಸಲಾಯಿತು. ನಿಪಿ.3 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅಪಘಾತದ ದಿನ ನಾನು ಓಡಿಸುತ್ತಿದ್ದ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಅದರಲ್ಲಿರುವ ಕಾರ್ ಅನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ನನ್ನ ಕಾರಿಗೆ ಅಪಘಾತ ಪಡಿಸಿದ್ದ ಬಸ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎರಡು ಭಾವಚಿತ್ರಗಳಲ್ಲಿ ಬಸ್ ನೋಡಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು. ಬಸ್ ಚಾಲನೆ ಮಾಡುತ್ತಿದ್ದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

## <u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>

ಅಪಘಾತದ ದಿಃ 05.05.2019 ರಂದು ಆಗಿರುತ್ತದೆ. ಅಪಘಾತ ಸಂಬಂಧ ದೂರನ್ನು ನಾನು ದಿಃ 06.05.2019 ರಂದು ನೀಡಿರುತ್ತೇನೆ. ನನಗೆ ಕನ್ನಡ ಭಾಷೆ ಬರುವುದಿಲ್ಲದ ಕಾರಣ ಮತ್ತು ಅಧಿಕಾರಿಗಳ ಬಗ್ಗೆ ಗೊತ್ತಿಲ್ಲದ ವಿಚಾರಕ್ಕೆ ದೂರನ್ನು ಅದೇ ದಿನ ಕೊಡಲು ಆಗುವುದಿಲ್ಲ. ಅಪಘಾತ ಆದ ಬೆಳಗೊಳ ಗ್ರಾಮದ ರಸ್ತೆ ಎರಡು ಪಥದ್ದು ಆಗಿದ್ದು ಅಲ್ಲಿ ಡಿವೈಡರ್ ಸಹ ಇರುತ್ತದೆ ಎಂದರೆ ಸುಳ್ಳು. ನನ್ನ ಜೊತೆ ಅಪಘಾತದ ದಿನ ಇದ್ದ ಸುನೀಲ್ ಕುಮಾರ್ ಈಗ ತಹಶೀಲ್ದಾರ್ ಆಗಿದ್ದಾರೆ ಎಂದರೆ ಸರಿ. ಅಪಘಾತದ ದಿನ ನನ್ನ ಕಾರಿನ ಮುಂದೆ ಬೈಕ್ ಚಲಿಸುತ್ತಿತ್ತು ಎಂದರೆ ಸರಿ. ನಾನು ಅಪಘಾತ ಸಮಯದಲ್ಲಿ ಕಾರನ್ನು ನಿಲ್ಲಿಸಿದ್ದೆ ಕಾರನ್ನು ಚಾಲನೆ ಮಾಡುತ್ತಿರಲಿಲ್ಲ. ನಾನು ಕಾರನ್ನು ಅತಿ ವೇಗವಾಗಿ ಚಾಲನೆ ಮಾಡುತ್ತಿದ್ದು ನನ್ನ ಕಾರಿನ ಮುಂದೆ ಬೈಕ್ ಅಡ್ಡ ಬರಲಾಗಿ ತಕ್ಷಣ ಬ್ರೇಕ್ ಹಾಕಿದ ಕಾರಣ ಬಸ್ ಚಾಲಕ ನನ್ನ ಕಾರಿನ ಹಿಂಭಾಗಕ್ಕೆ ಡಿಕ್ಕಿ ಪಡಿಸಿದ್ದಾನೆ ಎಂದರೆ ಸಾಕ್ಷಿಯು ನಾನು ನಿಧಾನವಾಗಿಯೇ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತ ಆದ ಸಮಯದಲ್ಲಿ ನಾನು ಮೊಬೈಲ್ ನಲ್ಲಿ ಮಾತನಾಡಿಕೊಂಡು ಕಾರ್ ಚಾಲನೆ ಮಾಡುತ್ತಿದ್ದೆ ಎಂದರೆ ಸುಳ್ಳು. ನಾನು ಪೋಲೀಸ್ ಠಾಣೆಯಲ್ಲಿ ಕುಳಿತು ದೂರನ್ನು ಸೃಷ್ಟಿಸಿದ್ದೇನೆ ಎಂದರೆ ಸಾಕ್ಷಿಯು ನಾನು ಬರವಣಿಗೆ ಮಾಡಿ ದೂರು ಕೊಡಿದ್ದು ಅಲ್ಲ ಎಂದು ನುಡಿಯುತ್ತಾರೆ. ಅಪಘಾತ ನನ್ನ ಅತಿ ವೇಗ ಮತ್ತು ಅಜಾಗರೂಕತೆ ಚಾಲನೆಯಿಂದ ಆಗಿದೆ ಮತ್ತು ಪರಿಹಾರ ಕೇಳುವ ಸಲುವಾಗಿ ಕೆ.ಎಸ್.ಆರ್.ಟಿ.ಸಿ. ಡ್ರೈವರ್ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಆದ ದಿನ ನಿಮ್ಮ ಕಾರಿನ ಮುಂಭಾಗ ನಂಬರ್ ಪ್ಲೇಟ್ ಸಹ ಜಖಂಗೊಂಡಿದ್ದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಸ್ ಹಿಂಭಾಗದಿಂದ ಡಿಕ್ಕಿ ಪಡಿಸಿದ ಕಾರಣ ನನ್ನ ಕಾರು ಮುಂದೆ ಸಾಗಿ ಮೋಟಾರ್ ಬೈಕ್ ಡಿಕ್ಕಿ ಪಡಿಸಿ ನಂಬರ್ ಪ್ಲೇಟ್ ಜಖಂಗೊಂಡಿದೆ ಎಂದು ನುಡಿಯುತ್ತಾರೆ. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.